# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **470**

ಸದಸ್ಯರ ಹೆಸರು : ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : **19.08.2026**

ಉತ್ತರಿಸುವ ಸಚಿವರು : ಮಾನ್ಯ ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಆಹಾರ ಮತ್ತು ನಾಗರೀಕ ಇಲಾಖೆಯಿಂದ ನೀಡಲಾಗುವ ವಿವಿಧ ಬಗೆಯ ಪಡಿತರ ಚೀಟಿಗಳು ಯಾವುವು; ಮತ್ತು ಎಷ್ಟು; ಈ ವಿವಿಧ ಪಡಿತರ ಚೀಟಿಗಳನ್ನು ವಿತರಿಸುವಲ್ಲಿ ಇರುವ ನಿಯಮ ಮತ್ತು ಮಾನದಂಡಗಳು ಯಾವುವು; (ಜಿಲ್ಲಾವಾರು ಮಾಹಿತಿ ನೀಡುವುದು) | ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಈ ಕೆಳಕಂಡಂತೆ ಪಡಿತರ ಚೀಟಿಗಳು<br>1) ಅಂತ್ಯೋದಯ ಅನ್ನ ಯೋಜನೆ (AAY)<br>2) ಆದ್ಯತಾ ಪಡಿತರ ಚೀಟಿಗಳು (PHH)<br>3) ಆದ್ಯತೇತರ ಪಡಿತರ ಚೀಟಿಗಳು.(NPHH)<br>**1)ಕೇಂದ್ರ ಸರ್ಕಾರದಿಂದ ಅಂತ್ಯೋದಯ ಅನ್ನ ಪಡಿತರ ಚೀಟಿ ಪಡೆಯಲು ನಿಗಧಿಪಡಿಸಿರುವ ಸೇರ್ಪಡೆ ಮಾನದಂಡಗಳು ಈ ಕೆಳಗಿನಂತಿದೆ:**<br>ವಿಧವೆಯರು ಅಥವಾ ಮಾರಕ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗಳು ಅಥವಾ ಅಂಗವಿಕಲರು ಅಥವಾ 60 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರು ಈ ಜೀವನಾಧಾರ ಅಥವಾ ಬೆಂಬಲವಿಲ್ಲದೆ ಇರುವವರು.<br><br>ವಿಧವೆಯರು ಅಥವಾ ಮಾರಕ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗಳು ಅಥವಾ ಅಂಗವಿಕಲರು ಅಥವಾ 60 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರು ಅಥವಾ ಕುಟುಂಬ ಅಥವಾ ಸಾಮಾಜಿಕ ಬೆಂಬಲ ಅಥವಾ ಜೀವನಾಧಾರವಿಲ್ಲದೆ ಇರುವ ಒಂಟಿ ಮಹಿಳೆಯರು ಅಥವಾ ಒಂಟಿ ಪುರುಷರು.<br>ಎಲ್ಲಾ ಪ್ರಾಚೀನ ಬುಡಕಟ್ಟು ಕುಟುಂಬಗಳು.<br>(ವಿಸ್ತರಿತ AAY ಅಡಿಯಲ್ಲಿ ಬುಡಕಟ್ಟು ಫಲಾನುಭವಿಗಳು ರಾಜ್ಯ / ಕೇಂದ್ರಾಡಳಿತ ಪ್ರದೇಶದಲ್ಲಿರುವ ಬುಡಕಟ್ಟು ಜನಸಂಖ್ಯೆಗೆ ಅನುಗುಣವಾಗಿರಬೇಕು).<br>HIV ಪೀಡಿತರು<br>ಭೂರಹಿತ ಕೃಷಿ ಕಾರ್ಮಿಕರು |

**2. ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಸರ್ಕಾರವು 2017 ರಲ್ಲಿ ಹೊರಗಿಡುವ ಮಾನದಂಡಗಳನ್ನು ರೂಪಿಸಿದೆ. ವಿವರ ಈ ಕೆಳಕಂಡತಿರುತ್ತದೆ.**

ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು /ಮಂಡಳಿಗಳು /ನಿಗಮಗಳು/

ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.

ಗ್ರಾಮೀಣ ಪ್ರದೇಶಗಳಲ್ಲಿ 03 – ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.

ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.

ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.

**3) ಆದ್ಯತೇತರ ಪಡಿತರ ಚೀಟಿ (NPHH) ಪಡೆಯಲು ಯಾವುದೇ ಮಾನದಂಡ ಇರುವುದಿಲ್ಲ.**

ದಿನಾಂಕ 30.07.2026 ರ ಅಂತ್ಯಕ್ಕೆ ರಾಜ್ಯದಲ್ಲಿರುವ ವಿವಿಧ ಬಗೆಯ ಪಡಿತರ ಚೀಟಿಗಳ ವಿವರಗಳನ್ನು ಅನುಬಂಧ - 01 ರಲ್ಲಿ ಒದಗಿಸಲಾಗಿದೆ.

ಜಿಲ್ಲಾವಾರು ವಿವರಗಳನ್ನು ಅನುಬಂಧ-02ರಲ್ಲಿ ಒದಗಿಸಲಾಗಿದೆ.

| | | |
|---|---|---|
| | | ಹಾಗೂ ಮಹಿಳಾ ಸ್ವ ಸಹಾಯ ಗುಂಪುಗಳು.<br><br>ವೈಯಕ್ತಿಕ:<br><br>•ಅಂಗವಿಕಲರ ವರ್ಗ (ಪ್ರಾರಂಭಿಕವಾಗಿ 400 ನ್ಯಾಯಬೆಲೆ ಅಂಗಡಿಗಳು)<br>• ತೃತೀಯ ಲಿಂಗ/ಮಂಗಳ ಮುಖಿಯರ ವರ್ಗ (ಪ್ರಾರಂಭಿಕವಾಗಿ 30 ನ್ಯಾಯಬೆಲೆ ಅಂಗಡಿಗಳು)<br><br>ಸಹಕಾರ ಸಂಘಗಳ ಗುಣಮಟ್ಟ ಅಳೆಯುವುದಕ್ಕೆ ಸಂಘಗಳ<br><br>ಲೆಕ್ಕ ಪರಿಶೋಧನಾ ಶ್ರೇಣಿ ಎ, ಬಿ ಮತ್ತು ಸಿ ಯನ್ನು ಮಾನದಂಡವನ್ನಾಗಿ ಪರಿಗಣಿಸಲಾಗುತ್ತದೆ.<br>ಸಂಘವು 3 ವರ್ಷಗಳಿಗಿಂತ ಹಳೆಯದಾಗಿರತಕ್ಕದ್ದು ಮತ್ತು ಕಳೆದ 2 ವರ್ಷಗಳ ಅವಧಿಯಲ್ಲಿ ನಿರಂತರವಾಗಿ ಕನಿಷ್ 02 ಲಕ್ಷ ರೂಪಾಯಿಗಳ ಬ್ಯಾಲೆನ್ಸ್ ಅನ್ನು ನಿರ್ವಹಿಸಿಕೊಂಡು ಬಂದಿರತಕ್ಕದ್ದು.<br><br>ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016 ರ ಕಲಂ 11(2) ರನ್ವಯ ಪಟ್ಟಣ ಪ್ರದೇಶದಲ್ಲಿ ಕನಿಷ್ಟ 800 ಪಡಿತರ ಚೀಟಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಟ 500 ಪಡಿತರ ಚೀಟಿಗಳಿಗೆ ಹೊಸ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲು ಅವಕಾಶವಿದ್ದು, ಅದರಂತೆ ಅಗತ್ಯಾನುಸಾರ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲಾಗುತ್ತಿದೆ.<br><br>ಸರ್ಕಾರದ ಸುತ್ತೋಲೆ ದಿನಾಂಕ 13.02.2024 ರನ್ವಯ ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016 ರ ಕಲಂ 16(1) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಲಾಗಿರುತ್ತದೆ.<br><br>"ಈಗಾಗಲೇ ಹೊಸ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಲು ಹೊರಡಿಸಿರುವ ಅಧಿಸೂಚನೆಯನ್ನು ಹಾಗೂ ಎಲ್ಲಾ ಪ್ರಕ್ರಿಯೆಗಳನ್ನು ಕೂಡಲೇ ತಡೆಹಿಡಿಯುವುದು ಹಾಗೂ ಇನ್ನುಮುಂದೆ ಯಾವುದೇ ಹೊಸ ನ್ಯಾಯಬೆಲೆ ಅಂಗಡಿ ಮಂಜೂರಾತಿಗಾಗಿ ಸಾರ್ವಜನಿಕ ಪ್ರಕಟಣೆ ಹೊರಡಿಸುವ ಮುನ್ನ ಹೊಸ ನ್ಯಾಯಬೆಲೆ ಅಂಗಡಿಯ |

| | | |
|---|---|---|
| ಆ | ರಾಜ್ಯದಲ್ಲಿರುವ ವಿವಿಧ ಬಗೆಯ ಎಷ್ಟು ಅನಧಿಕೃತ ಪಡಿತರ ಖಾತೆಗಳನ್ನು ತೆರೆವುಗೊಳಿಸಲಾಗಿದೆ; | ದಿನಾಂಕ 30.07.2026 ರ ಅಂತ್ಯಕ್ಕೆ ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಿ ಕ್ರಮವಹಿಸಲಾಗಿರುವ ಮಾಹಿತಿಯನ್ನು<br>ಅನುಬಂಧ-03 ರಲ್ಲಿ ಒದಗಿಸಲಾಗಿದೆ. |
| ಇ | ನ್ಯಾಯಬೆಲೆ ಅಂಗಡಿಗಳನ್ನು ಸ್ಥಾಪಿಸಲು ಇರುವ ನಿಯಮ ಮತ್ತು ಮಾನದಂಡಗಳು ಯಾವುವು; ಹಾಗೂ ಸಾರ್ವಜನಿಕರು ನ್ಯಾಯಬೆಲೆ ಅಂಗಡಿ ಪರವಾನಗಿಯನ್ನು ಪಡೆಯಲು ಇರುವ ನಿಯಮ ಮತ್ತು ಮಾನದಂಡಗಳು ಯಾವುವು; ಈ ಹಿಂದೆ ಇದ್ದ ಹಾಗೂ ಪ್ರಸ್ತುತ ಇರುವ ನಿಯಮ ಮತ್ತು ಮಾನದಂಡಗಳ ಮಾಹಿತಿ ನೀಡುವುದು; | ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ಪದ್ಧತಿ) ನಿಯಂತ್ರಣ ಆದೇಶ 2016 ಕಲಂ 6 ರ ತಿದ್ದುಪಡಿ ಆದೇಶ ದಿನಾಂಕ: 21.05.2018 ಮತ್ತು 18.12.2020 ರಂತೆ ಕೆಳಕಂಡಂತೆ ಆದ್ಯತೆ ನಿಗಧಿಪಡಿಸಲಾಗಿತ್ತು:<br><br>ಸರ್ಕಾರದ ನಿಗಮಗಳು / ಗ್ರಾಮ ಪಂಚಾಯಿತಿ / ಸ್ಥಳೀಯ ನಗರ ಸಂಸ್ಥೆಗಳು<br>ಸಹಕಾರ ಸಂಘಗಳು<br>ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿಸಂಘ (ನಿ) (TAPCMS)<br><br>ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಅಥವಾ ವ್ಯವಸಾಯ ಸೇವಾ ಸಹಕಾರಿ ಸಂಘ ನಿಯಮಿತ (VSSSN)<br>ತೋಟಗಾರಿಕೆಯ ಉತ್ಪಾದಕರ ಸಹಕಾರ ಮಾರ್ಕೆಟಿಂಗ್ ಮತ್ತು ಸಂಸ್ಕರಣೆ ಸಂಘ ನಿಯಮಿತ (HOPCOMS)<br>ನೋಂದಾಯಿತ ಸಹಕಾರಿ ಸಂಘಗಳು.<br>ನೋಂದಾಯಿತ ಪ್ರಾಥಮಿಕ ಗ್ರಾಹಕರ ಸಹಕಾರಿ ಸಂಘ<br>LAMPS ಸಹಕಾರಿ ಸಂಘಗಳು (ಬೃಹತ್ ಗ್ರಾಹಕ ಆದಿವಾಸಿ ವಿವಿಧೋದ್ದೇಶ ಸಂಘ)<br>ನೋಂದಾಯಿತ ನೇಕಾರರ ಸಹಕಾರಿ ಸಂಘ<br>ನೋಂದಾಯಿತ ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘ<br>ನೋಂದಾಯಿತ ವಿವಿಧೋದ್ದೇಶ ಸಹಕಾರಿ ಸಂಘ<br>ವಿಕಲಚೇತನ ಕಲ್ಯಾಣ ಸಹಕಾರಿ ಸಂಘ<br><br>ಸಹಕಾರಿ ಸಂಘಗಳಿಂದ ನಡೆಸಲ್ಪಡುತ್ತಿರುವ ಬ್ಯಾಂಕ್ ಅಥವಾ ಸಹಕಾರಿ ಬ್ಯಾಂಕ್‌ಗಳು<br><br>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮಾನ್ಯತೆ ಪಡೆದು ಕಳೆದ (3) ವರ್ಷಗಳಿಂದ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಕಳೆದ ಒಂದು ವರ್ಷದಲ್ಲಿ ಕನಿಷ್ಠ ಒಂದು ಲಕ್ಷ ರೂಪಾಯಿ ಬ್ಯಾಂಕ್ ಖಾತೆಯಲ್ಲಿ ನಿರಂತರವಾಗಿ ಠೇವಣಿ ಹೊಂದಿರುವಂತಹ ಸ್ಥಳೀಯ ಸ್ತ್ರೀಶಕ್ತಿ ಗುಂಪುಗಳು |

| | | |
|---|---|---|
| | | ಅಗತ್ಯತೆ ಕುರಿತು ಸಕಾರಣಗಳನ್ನು ನಮೂದಿಸಿ, ಸಮಗ್ರವಾದ ಮಾಹಿತಿಯನ್ನು ಆಯುಕ್ತರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರ ಮೂಲಕ ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆಯುವಂತೆ ಸೂಚಿಸಿದೆ"<br><br>ಸರ್ಕಾರದ ದಿನಾಂಕ 11.03.2026 ರ ಆದೇಶದಲ್ಲಿ ಹೊಸ ನ್ಯಾಯಬೆಲೆ ಅಂಗಡಿ ಮಂಜೂರಾತಿಗೆ ಪ್ರಕಟಣೆ ಹೊರಡಿಸಲು ಸರ್ಕಾರದ ಪೂರ್ವಾನುಮತಿ ಪಡೆಯುವ ಕುರಿತು ಹೊರಡಿಸಲಾಗಿದ್ದ ದಿನಾಂಕ 13.02.2024 ರ ಸುತ್ತೋಲೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯಿಂದ ಪ್ರಸ್ತಾವನೆಯನ್ನು ಪಡೆದು ಆಯುಕ್ತರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಇವರ ಹಂತದಲ್ಲಿ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ, ಅನುಮೋದನೆ ನೀಡುವಂತೆ ಆದೇಶಿಸಲಾಗಿತ್ತು.<br><br>ಪ್ರಸ್ತುತ ದಿನಾಂಕ 04.07.2026 ರಂದು ಸರ್ಕಾರವು ಆದೇಶವನ್ನು ಹೊರಡಿಸಿ, ಸದರಿ ಆದೇಶದಲ್ಲಿ ಹೊಸ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಮಂಜೂರು ಮಾಡುವುದಕ್ಕೆ ಸಂಬಂಧಿಸಿದಂತೆ ಸರ್ಕಾರದ ದಿನಾಂಕ 11.03.2026 ಆದೇಶದಲ್ಲಿನ ಆದೇಶ ಭಾಗದ ಕಂಡಿಕೆ 2 ನ್ನು ಮಾರ್ಪಡಿಸಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಅಲ್ಲಿಂದ ಬರುವ ಪ್ರಸ್ತಾವನೆಗಳಿಗೆ ಆಯುಕ್ತರ ಕಛೇರಿಯಲ್ಲಿ ಅನುಮೋದನೆ ನೀಡುವ ಪ್ರಕ್ರಿಯೆಗಳಲ್ಲಿ ಉಂಟಾಗುವ ವಿಳಂಬವನ್ನು ತಡೆಗಟ್ಟುವ ಉದ್ದೇಶದಿಂದ ದಿನಾಂಕ: 17-11-2025 ರ ಸರ್ಕಾರದ ಆದೇಶದಲ್ಲಿ ಸೂಚಿಸಿರುವಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ಅನುಮೋದಿಸುವ ನಡವಳಿಯಂತೆ ಸಂಬಂಧಿಸಿದ ಜಿಲ್ಲೆಯ ಜಂಟಿ/ಉಪ ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರ ಹಂತದಲ್ಲಿ ನಿಯಮಾನುಸಾರ ಅನುಮೋದನೆ ನೀಡಲು ವಹಿಸಬೇಕಾದ ಕ್ರಮವನ್ನು ವಿವರಿಸಲಾಗಿದೆ.<br><br>ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ:ಆನಾಸ/86/ಆರ್ ಪಿಆರ್/2025 ದಿನಾಂಕ: 14-11-2025ರ ಸರ್ಕಾರದ |

| | | |
|---|---|---|
| | | ಅಧಿಸೂಚನೆಯಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಸಮುದಾಯಗಳ ಜನಸಂಖ್ಯೆಯು **40%** ಕ್ಕಿಂತ ಹೆಚ್ಚಿರುವ ನ್ಯಾಯಬೆಲೆ ಅಂಗಡಿ ಪ್ರದೇಶದಲ್ಲಿ ಆದ್ಯತೆಯ ಮೇಲೆ ಹೊಸ ನ್ಯಾಯಬೆಲೆ ಅಂಗಡಿಗಳು ಅಥವಾ ಸಮೀಕರಿಸಿದ ನ್ಯಾಯಬೆಲೆ ಅಂಗಡಿಗಳನ್ನು ಸದರಿ ಸಮುದಾಯಗಳಿಗೆ (ಪರಿಶಿಷ್ಟ ಜಾತಿಗಳಿಗೆ 17% ಮತ್ತು ಪರಿಶಿಷ್ಟ ಪಂಗಡಗಳಿಗೆ 07%) ನೀಡಲಾಗುವುದು ಎಂದು ಆದೇಶಿಸಲಾಗಿದೆ.<br><br>ಹಾಗೂ ಸರ್ಕಾರದ ಆದೇಶ ಸಂಖ್ಯೆ:ಆನಾಸ/86/ಆರ್‌ಪಿಆರ್/2025 (ಭಾ-3) ದಿನಾಂಕ: 17-11-2025 ರಲ್ಲಿ ಸದರಿ ತಿದ್ದುಪಡಿ ಆದೇಶದನ್ವಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಮುದಾಯದ ಸಂಘ ಸಂಸ್ಥೆಗಳಿಗೆ/ ಸದರಿ ಸಮುದಾಯದ ಖಾಸಗಿ ವ್ಯಕ್ತಿಗಳಿಗೆ ಮೀಸಲಾತಿಯನ್ನು ಅನುಸರಿಸಿ ಹೊಸ ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವ ಸಲುವಾಗಿ ಪ್ರಕಟಣೆ ಹೊರಡಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಸಮಿತಿಯನ್ನು ರಚಿಸಲು ಆದೇಶಿಸಿ ಸದರಿ ಜಿಲ್ಲಾಮಟ್ಟದ ಸಮಿತಿಯು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ನೀಡಲಾಗಿದೆ.<br><br>ಹೊಸ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಅಧಿಸೂಚನೆ ಹೊರಡಿಸುವ ಸಂದರ್ಭಗಳಲ್ಲಿ ಪಾಲಿಸಬೇಕಾದ ಮಾರ್ಗಸೂಚಿಗಳು<br><br>**A.** ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗಗಳ ಸಮುದಾಯಗಳ ಪ್ರದೇಶಗಳಿಗೆ ಹೊಸ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಅಧಿಸೂಚನೆ ಹೊರಡಿಸುವ ಸಂದರ್ಭಗಳಲ್ಲಿ ಪಾಲಿಸಬೇಕಾದ ಮಾರ್ಗಸೂಚಿಗಳು<br><br>ಹೊಸ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಮಂಜೂರಾತಿಗಾಗಿ ಸ್ವೀಕರಿಸಲ್ಪಡುವ ಎಲ್ಲಾ ಪ್ರಸ್ತಾವನೆಗಳನ್ನು ಜಿಲ್ಲಾ ಮಟ್ಟದ ಸಮಿತಿಯ ಪರಿಗಣನೆಗಾಗಿ ಮಂಡಿಸಿ ಸರ್ಕಾರದ ಆದೇಶ ಸಂಖ್ಯೆ: ಇ-ಅನಾಸ 86 ಆರ್‌ಪಿಆರ್ 2025 (ಭಾ-3) ಬೆಂಗಳೂರು ದಿನಾಂಕ: 17.11.2025 ರಂತೆ ಅಗತ್ಯ ಕ್ರಮ ಕೈಗೊಳ್ಳುವುದು.<br><br>ಜಿಲ್ಲಾ ಮಟ್ಟದ ಸಮಿತಿಯ ನಿರ್ಣಯದಂತೆ ಹೊಸ ಪ್ರಾಧಿಕಾರದಿಂದ ಅಧಿಸೂಚನೆ ಹೊರಡಿಸುವುದು.<br><br>ಪರಿಶಿಷ್ಟ ಜಾತಿ ಸಮುದಾಯಗಳಿಗೆ ಹೊಸ ನ್ಯಾಯಬೆಲೆ |

| | | |
|---|---|---|
| | | ಅಂಗಡಿ ಪ್ರಾಧಿಕಾರ ಅಧಿಸೂಚನೆ ಮತ್ತು ಮಂಜೂರು ಮಾಡುವಾಗ ಪರಿಶಿಷ್ಟ ಜಾತಿ ಉಪ ವರ್ಗೀಕರಣದ ಆದೇಶಗಳಂತೆ ಮಂಜೂರು ಮಾಡಲು ಕ್ರಮವಹಿಸುವುದು.<br><br>ಪರಿಶಿಷ್ಟ ಜಾತಿ ಸಮುದಾಯಗಳಿಗೆ ಹೊಸ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಅಧಿಸೂಚನೆ ಮತ್ತು ಮಂಜೂರು ಮಾಡುವಾಗ ಪರಿಶಿಷ್ಟ ಜಾತಿ ಉಪ ವರ್ಗೀಕರಣದ ಆದೇಶಗಳಂತೆ ಮಂಜೂರು ಮಾಡಲು ಕ್ರಮವಹಿಸುವುದು.<br><br>B. ಇತರೇ ವರ್ಗದ ಸಮುದಾಯಗಳ ಪ್ರದೇಶಗಳಿಗೆ ಹೊಸ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಮಂಜೂರು ಮಾಡುವ ಸಂದರ್ಭದಲ್ಲಿ ಪಾಲಿಸಬೇಕಾದ ಮಾರ್ಗಸೂಚಿಗಳು ಹೊಸ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಮಂಜೂರಾತಿಗಾಗಿ ಸ್ವೀಕರಿಸಲ್ಪಡುವ ಎಲ್ಲ ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳ ಪೂರ್ವಾನುಮತಿಗಾಗಿ ಸಲ್ಲಿಸುವುದು.<br><br>ಪ್ರಸ್ತಾವನೆಯಲ್ಲಿ ಸ್ವೀಕೃತಗೊಂಡ ಪ್ರದೇಶಗಳಲ್ಲಿ ಹೊಸ ನ್ಯಾಯಬೆಲೆ ಅಂಗಡಿ ಮಂಜೂರಿಸುವ ಅಗತ್ಯತೆ ಕುರಿತು ಖಚಿತಪಡಿಸಿಕೊಳ್ಳುವುದು.<br>ನ್ಯಾಯಬೆಲೆ ಅಂಗಡಿಗಳ ಆರ್ಥಿಕ ಕಾರ್ಯಸಾಧ್ಯತೆ (Economic Viability) ಹಿನ್ನಲೆಯಲ್ಲಿ ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ 2016 ಹಾಗೂ ಸದರಿ ಆದೇಶದ ತಿದ್ದುಪಡಿ ಆದೇಶಗಳ ಕ್ಲಾಜ್ 11(2) ರನ್ವಯ ಉದ್ದೇಶಿತ ಹೊಸ ನ್ಯಾಯ ಬೆಲೆ ಅಂಗಡಿಗೆ ನಿಯೋಜಿಸಲಾಗುವ ಹಾಗೂ ಮೂಲ ನ್ಯಾಯಬೆಲೆ ಅಂಗಡಿಯಲ್ಲಿ ಕನಿಷ್ಠ ಪಡಿತರ ಚೀಟಿಗಳು ಉಳಿಕೆಯಾಗುವುದನ್ನು ಖಾತರಿ ಪಡಿಸಿಕೊಳ್ಳಬೇಕು.<br>ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ 2016 ಹಾಗೂ ಸದರಿ ಆದೇಶದ ತಿದ್ದುಪಡಿ ಆದೇಶಗಳ ಕ್ಲಾಜ್ 11(2) ರನ್ವಯ ಕನಿಷ್ಠ ಪಡಿತರ ಚೀಟಿಗಳು ಲಭ್ಯವಿಲ್ಲದಿರುವ ಪ್ರಸ್ತಾವನೆಗಳನ್ನು ಅಧಿಸೂಚನೆ ಹೊರಡಿಸಲು ಪರಿಗಣಿಸಬಾರದು.<br>ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ 2016 ಹಾಗೂ ಸದರಿ |


| | | |
|---|---|---|
| | | ಆದೇಶದ ತಿದ್ದುಪಡಿ ಆದೇಶಗಳ ಕ್ಲಾಜ್ 11(2) ರನ್ವಯ ನಿಯೋಜನೆಗೆ ಆಹಾರ ಧಾನ್ಯಗಳ ಹಂಚಿಕೆಯಿರುವ ಕೇವಲ ಅಂತ್ಯೋದಯ (AAY) ಹಾಗೂ ಆದ್ಯತಾ (PHH) ಪಡಿತರ ಚೀಟಿಗಳನ್ನು ಮಾತ್ರ ಪರಿಗಣಿಸುವುದು.<br>ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ 2016 ಹಾಗೂ ಸದರಿ ಆದೇಶದ ತಿದ್ದುಪಡಿ ಆದೇಶಗಳ ಕ್ಲಾಜ್ 11(2) ರನ್ವಯ ಬುಡಕಟ್ಟು ಹಾಡಿಗಳು/ತಾಂಡಾಗಳು/ಗೊಲ್ಲರಪಟ್ಟಿ ಇತ್ಯಾದಿಗಳಂತಹ ವಿಶೇಷ ಪ್ರದೇಶಗಳಲ್ಲಿ 100 ಪಡಿತರ ಚೀಟಿಗಳಿಗೆ ವಿನಾಯಿತಿಗೊಳಿಸಿ ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಪ್ರಸ್ತಾವನೆಯಲ್ಲಿನ ಹಾಡಿಗಳು /ತಾಂಡಾಗಳು /ಗೊಲ್ಲರಹಟ್ಟಿ ಪ್ರದೇಶಗಳು ಇತ್ಯಾದಿಗಳಂತಹ ಪ್ರದೇಶವಾಗಿರುವ ಕುರಿತು ಪರಿಶೀಲಿಸಿ ವಿನಾಯಿತಿ ನೀಡುವುದು.<br>ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಪಡೆದ ನಂತರ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರದಿಂದ ಅಧಿಸೂಚನೆ ಹೊರಡಿಸುವುದು.<br>ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ 2016 ಹಾಗೂ ಸದರಿ ಆದೇಶದ ತಿದ್ದುಪಡಿ ಆದೇಶಗಳ ಕ್ಲಾಜ್ 5 ರನ್ವಯ ಅರ್ಹತಾ ಮಾನದಂಡಗಳನ್ನು (Conditions for Eligibility) ಪೂರೈಸಿರುವುದನ್ನು ಖಚಿತಪಡಿಸಿಕೊಳ್ಳುವುದು.<br>ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ 2016 ಹಾಗೂ ಸದರಿ ಆದೇಶದ ತಿದ್ದುಪಡಿ ಆದೇಶಗಳ ಕ್ಲಾಜ್ 6 ರನ್ವಯ ಆದ್ಯತೆಯ ಅನುಕ್ರಮವನ್ನು (Order of Priority for Grant of Authorization) ಪಾಲಿಸುವುದು.<br>ಪ್ರಾಧಿಕಾರ ಪಡೆಯುವ ಸಂಸ್ಥೆಗಳು ಸಹಕಾರ ಸಂಘಗಳಾದಲ್ಲಿ:<br>. ಕನಿಷ್ಠ ಮೂರು ವರ್ಷಕ್ಕಿಂತ ಹೆಚ್ಚು ಕಾಲ ಕಾರ್ಯನಿರ್ವಹಿಸುತ್ತಿರಬೇಕು.<br>. ಸಂಘದ ಗುಣಮಟ್ಟದ ಮೌಲ್ಯಮಾಪನಕ್ಕೆ<br>ಲೆಕ್ಕಪರಿಶೋಧನೆಯಲ್ಲಿ ನೀಡಲಾದ A, B ಮತ್ತು C |

| | | |
|---|---|---|
| | | ಶ್ರೇಣಿಗಳನ್ನು ಪರಿಗಣಿಸುವುದು.<br><br>ಕಳೆದ ಎರಡು ವರ್ಷದಳಲ್ಲಿ ನಿರಂತರವಾಗಿ ಕನಿಷ್ಠ 2 ಲಕ್ಷಗಳ ಬ್ಯಾಂಕ್ ಬ್ಯಾಲೆನ್ಸ್ ಹೊಂದಿರಬೇಕು.<br><br>ಪ್ರಾಧಿಕಾರ ಪಡೆಯುವ ಸಂಸ್ಥೆಗಳು ಸ್ತ್ರೀ ಶಕ್ತಿ ಸಂಘ/ ಮಹಿಳಾ ಸ್ವಸಹಾಯ ಸಂಘಗಳಾದಲ್ಲಿ:<br><br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಮಾನ್ಯತೆಯನ್ನು ಪಡೆದಿರಬೇಕು.<br>ಕಳೆದ ಒಂದು ವರ್ಷದಲ್ಲಿ ನಿರಂತರವಾಗಿ ಕನಿಷ್ಠ 1 ಲಕ್ಷಗಳ ಬ್ಯಾಂಕ್ ಬ್ಯಾಲೆನ್ಸ್ ಹೊಂದಿರಬೇಕು.<br>ಕನಿಷ್ಠ ಒಂದು ವರ್ಷದಿಂದ ಅಸ್ತಿತ್ವದಲ್ಲಿರಬೇಕು.<br>ಪ್ರಾಧಿಕಾರ ಪಡೆಯುವರು ವೈಯಕ್ತಿಕ ವ್ಯಕ್ತಿಗಳಾದಲ್ಲಿ:<br>ನಿರ್ದಿಷ್ಟ ಮಾನದಂಡಿತ ವಿಕಲಚೇತರಾಗಿರಬೇಕು.<br>ತೃತೀಯ ಲಿಂಗದ ವ್ಯಕ್ತಿಯಾಗಿರಬೇಕು. |
| ಈ | ದಶಕಗಳಿಂದ ನ್ಯಾಯಬೆಲೆ ಅಂಗಡಿಯ ಪರವಾನಗಿ ಹೊಂದಿರುವ ವಿತರಕರಿಂದಲೇ ಅತೀ ಹೆಚ್ಚು ಪಡಿತರ ಕಳ್ಳಸಾಗಣಿಕೆಯ ಪ್ರಕರಣಗಳು ಬೆಳಕಿಗೆ ಬರುತ್ತಿರುವ ಬಗ್ಗೆ ಸಾರ್ವಜನಿಕರು ಆರೋಪಿಸುತ್ತಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ<br>ನಿಯಂತ್ರಣ ಆದೇಶದಲ್ಲಿ ನಿಗಧಿಪಡಿಸಿರುವ ನಿಯಮಗಳನ್ನು ಉಲ್ಲಂಘಿಸುವ ನ್ಯಾಯಬೆಲೆ ಅಂಗಡಿಗಳ ಪರವಾನಗಿಯನ್ನು ಅಮಾನತ್ತು/ ರದ್ದುಪಡಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಿಗಳಾದ ಜಂಟಿ/ಉಪ ನಿರ್ದೇಶಕರು ಹೊಂದಿದ್ದು, ಅದರಂತೆ ಹಾಗೂ ಅನ್ವಯವಾಗುವ ಇತರೇ ಕಾಯ್ದೆಗಳಡಿ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಕ್ರಮವಹಿಸಲು ಅವಕಾಶವಿರುತ್ತದೆ.<br><br>ಪಡಿತರ ಚೀಟಿದಾರರು ಆಹಾರ ಧಾನ್ಯ ಪಡೆಯಲು ವಂಚಿತರಾಗದಂತೆ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>ಆಹಾರ ಧಾನ್ಯಗಳನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ.<br><br>ಆಹಾರಧಾನ್ಯ ವಿತರಣೆಯಲ್ಲಿ ಪಾರದರ್ಶಕತೆಯನ್ನು ಅಳವಡಿಸಲು, ಪ್ರತಿ ಅರ್ಹ ಫಲಾನುಭವಿಗೆ ಪ್ರತಿ ಮಾಹೆ ಆಹಾರ ಧಾನ್ಯಗಳನ್ನು |

| | | |
|---|---|---|
| | | Aadhar Authenticated Bio-metric ವ್ಯವಸ್ಥೆ ಮೂಲಕ ವಿತರಣೆ ಮಾಡಲಾಗುತ್ತಿದೆ.<br><br>ONORC ಅಡಿ ಇಂಟರ್ ಮತ್ತು ಇಂಟ್ರಾ ಸ್ಟೇಟ್ ಪೋರ್ಟಬಿಲಿಟಿ ಎರಡನ್ನೂ ಅಳವಡಿಸಿ ಪಡಿತರ ವಿತರಣೆ ಮಾಡಲಾಗುತ್ತಿದೆ. ಆದ್ದರಿಂದ ಕಾರ್ಡ್ ಹೊಂದಿರುವವರು ರಾಜ್ಯದಾದ್ಯಂತ ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಬಹುದಾಗಿರುತ್ತದೆ.<br>ಎಫ್‌ಸಿಐ ಗೋಡೌನ್‌ಗಳು ಅಥವಾ ಶೇಖರಣಾ ಕೇಂದ್ರದಿಂದ ತಾಲ್ಲೂಕು ಸಗಟು ಗೋದಾಮುಗಳಿಗೆ ಹಾಗೂ ಸಗಟು ಗೋದಾಮುಗಳಿಂದ ನ್ಯಾಯಬೆಲೆ ಅಂಗಡಿಯವರೆಗೆ ಆಹಾರ ಧಾನ್ಯಗಳನ್ನು ಪ್ರತಿ ತಿಂಗಳು ಸಕಾಲಿಕವಾಗಿ ಎತ್ತುವಳಿಯಾಗುವುದನ್ನು ಖಚಿತಪಡಿಸಿಕೊಳ್ಳಲಾಗುತ್ತಿದ್ದು, ಈ ಉದ್ದೇಶಕ್ಕಾಗಿ ಸಗಟು ಮತ್ತು ಚಿಲ್ಲರೆ ಸಾಗಣೆಕೆದಾರರನ್ನು ಪಾರದರ್ಶಕ ಟೆಂಡರ್ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾಗುತ್ತದೆ.<br><br>ನ್ಯಾಯಬೆಲೆ ಅಂಗಡಿಗಳಲ್ಲಿ ಪಾರದರ್ಶಕವಾಗಿ ಆಹಾರ ಧಾನ್ಯ ಹಂಚಿಕೆ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಈ ಕೆಳಕಂಡ ಮಾಹಿತಿಯನ್ನು ಪ್ರದರ್ಶಿಸಲು ಹಾಗೂ ದಾಖಲೆಗಳನ್ನು ನಿರ್ವಹಿಸಲು ಅಗತ್ಯ ಕ್ರಮವಹಿಸುವಂತೆ ಸೂಚನೆ ನೀಡಲಾಗಿರುತ್ತದೆ.<br><br>1. ಪಡಿತರ ವಿತರಣೆ ಸಮಯ.<br><br>2.ನ್ಯಾಯಬೆಲೆ ಅಂಗಡಿಯ ಹೆಸರು, ಮಾಲೀಕರು, ಕಾರ್ಯದರ್ಶಿಗಳು ಮತ್ತು ಸಹಾಯಕರ ಹೆಸರು ಮತ್ತು ಮೊಬೈಲ್ ಸಂಖ್ಯೆ, ನ್ಯಾಯಬೆಲೆ ಅಂಗಡಿಯ ಪ್ರಾಧಿಕಾರ ಸಂಖ್ಯೆ ಮತ್ತು ವಿಳಾಸ.<br><br>3. ಸಂಬಂಧಿಸಿದ ನ್ಯಾಯಬೆಲೆ ಅಂಗಡಿ ವ್ಯಾಪ್ತಿಯ ಆಹಾರ ನಿರೀಕ್ಷಕರು, ಆಹಾರ ಶಿರಸ್ತೇದಾರರು ಮತ್ತು ಜಂಟಿ / ಉಪ ನಿರ್ದೇಶಕರ ಹೆಸರು ಮತ್ತು ವಿಳಾಸ ಹಾಗೂ ಮೊಬೈಲ್ ಸಂಖ್ಯೆ.<br>4. ರಾಜ್ಯ ಮಟ್ಟದ ಸಹಾಯವಾಣಿ ಸಂಖ್ಯೆಯಾದ 1967 ನ್ನು<br>ಪ್ರಕಟಿಸುವುದು. |

| | | |
|---|---|---|
| | | 5. Visitors Register ನ್ನು ಕಡ್ಡಾಯವಾಗಿ ನಿರ್ವಹಿಸುವುದು.<br>6. ನ್ಯಾಯಬೆಲೆ ಅಂಗಡಿಯ ಪ್ರಾಧಿಕರಣ ಪತ್ರ, ತೂಕದ ಯಂತ್ರಕ್ಕೆ<br>ಕಾನೂನು ಮಾಪನ ಶಾಸ್ತ್ರ, ಇಲಾಖೆಯಿಂದ ಪಡೆದ Calibration Certificate.<br>7. ಪ್ರತಿ ದಿನ ನ್ಯಾಯಬೆಲೆ ಅಂಗಡಿಯಲ್ಲಿ ಲಭ್ಯವಿರುವ ದಾಸ್ತಾನುಗಳ ವಿವರ.(Food grain wise stock details)<br>8. Day-wise Stock Register<br>9. Complaint Box<br>10. ಆಹಾರಧಾನ್ಯಗಳ ಮಾದರಿ ಪ್ರದರ್ಶಿಸುವುದು.<br>11. ಪ್ರತಿ ತಿಂಗಳ Scale Of Issue (ವಿತರಣಾ ಪ್ರಮಾಣ) ಪ್ರದರ್ಶಿಸುವುದು. |
| ಉ | ಕಳ್ಳಸಾಗಣಿಕೆಯಂತಹ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಲವು ದಶಕಗಳ ಹಿಂದೆ ಇದ್ದ ನಿಯಮ ಮತ್ತು ಮಾನದಂಡಗಳ ಅಡಿಯಲ್ಲಿ ಸ್ಥಾಪಿತವಾಗಿರುವ ನ್ಯಾಯಬೆಲೆ ಅಂಗಡಿಗಳ ವಿತರಕರ ಪರವಾನಗಿಯನ್ನು ರದ್ದುಗೊಳಿಸಿ ಹೊಸ ನಿಯಮ ಮತ್ತು ಮಾನದಂಡಗಳ ಅಡಿಯಲ್ಲಿ ಹೊಸ ನ್ಯಾಯಬೆಲೆ ಅಂಗಡಿಯನ್ನು ಸ್ಥಾಪಿಸಬಹುದಲ್ಲವೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ ನಿಯಂತ್ರಣ ಆದೇಶದಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಉಲ್ಲಂಘಿಸುವ ನ್ಯಾಯಬೆಲೆ ಅಂಗಡಿಗಳ ಪರವಾನಗಿಯನ್ನು ಅಮಾನತ್ತು/ ರದ್ದುಪಡಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಿಗಳಾದ ಜಂಟಿ/ಉಪ ನಿರ್ದೇಶಕರಿಗೆ ಇರುತ್ತದೆ.<br>ಈ ರೀತಿ ರದ್ದಾಗಿರುವ ನ್ಯಾಯಬೆಲೆ ಅಂಗಡಿಗಳಿಗೆ ಸಂಬಂಧಿಸಿದಂತೆ ಹೊಸ ನ್ಯಾಯಬೆಲೆ ಅಂಗಡಿಯನ್ನು ಹೊಸ ನಿಯಮ ಮತ್ತು ಮಾನದಂಡಗಳಡಿಯಲ್ಲಿ ಮಂಜೂರು ಮಾಡಲು ಕ್ರಮವಹಿಸಲಾಗುತ್ತಿದೆ. |

ಇ-ಆನಾಸ 83 ಆನಾಸ 2026



(ರಿಜ್ವಾನ್ ಅರ್ಷದ್)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

| ಅನುಬಂಧ-01 | | | |
|---|---|---|---|
| ಶ್ರೀ ಶಶೀಲ್ ಜಿ ನಮೋಶಿ ( ಶಿಕ್ಷಕರ ಕ್ಷೇತ್ರ)ರವರ ಚುಕ್ಕೆ ಗುರತಿಲ್ಲದ ಪ್ರಶ್ನೆ ಸಂಖ್ಯೆ: 470 | | | |
| ಪಡಿತರ ಚೀಟಿ ಮತ್ತು ಫಲಾನುಭವಿಗಳ ವಿವರ 30-07-2026 | | | |
| **ಪಡಿತರ ಚೀಟಿ ವಿಧ** | **ಕೇಂದ್ರ / ರಾಜ್ಯ** | **ಪಡಿತರ ಚೀಟಿ** | **ಸದಸ್ಯರು** |
| ಅಂತ್ಯೋದಯ ಅನ್ನ ಯೋಜನೆ (AAY) | ಕೇಂದ್ರ ಸರ್ಕಾರ | 10,44,580 | 42,52,559 |
| ಆದ್ಯತಾ ಕುಟುಂಬ (PHH/ BPL) | ಕೇಂದ್ರ ಸರ್ಕಾರ | 98,36,123 | 3,59,08,741 |
| **ಒಟ್ಟು AAY+PHH** | **ಕೇಂದ್ರ ಸರ್ಕಾರ** | **1,08,80,703** | **4,01,61,300** |
| ಆದ್ಯತಾ ಕುಟುಂಬ (PHH/ BPL) | ರಾಜ್ಯ ಸರ್ಕಾರ | 16,11,586 | 42,70,802 |
| **ಒಟ್ಟು (AAY+PHH)** | | **1,24,92,289** | **4,44,32,102** |
| ರಾಜ್ಯದ ಆದ್ಯತೇತರ ಕುಟುಂಬ (NPHH/ APL) | ರಾಜ್ಯ ಸರ್ಕಾರ | 29,71,937 | 1,02,13,065 |
| **ಒಟ್ಟು** | | **1,54,64,226** | **5,46,45,167** |

## ಅನುಬಂಧ-02

### ಶ್ರೀ ಶಶೀಲ್ ಜಿ ನಮೋಶಿ ( ಶಿಕ್ಷಕರ ಕ್ಷೇತ್ರ)ರವರ ಚುಕ್ಕೆ ಗುರತಿಲ್ಲದ ಪ್ರಶ್ನೆ ಸಂಖ್ಯೆ: 470

## ಜಿಲ್ಲಾವಾರು ಪಡಿತರ ಚೀಟಿಗಳು ಮತ್ತು ಫಲಾನುಭವಿಗಳ ವಿವರ 30.07.2026

| ಕ್ರ ಸಂ | ಜಿಲ್ಲೆಯ ಹೆಸರು | AAY ಪಡಿತರ ಚೀಟಿ ಸಂಖ್ಯೆ | PHH ಪಡಿತರ ಚೀಟಿ ಸಂಖ್ಯೆ | ಒಟ್ಟು AAY+PHH ಪಡಿತರ ಚೀಟಿ ಸಂಖ್ಯೆ | NPHH ಪಡಿತರ ಚೀಟಿ ಸಂಖ್ಯೆ | ಒಟ್ಟು ಪಡಿತರ ಚೀಟಿ ಸಂಖ್ಯೆ | AAY ಪಡಿತರ ಫಲಾನುಭವಿಗಳ ಸಂಖ್ಯೆ | PHH ಪಡಿತರ ಫಲಾನುಭವಿಗಳ ಸಂಖ್ಯೆ | ಒಟ್ಟು AAY+PHH ಪಡಿತರ ಫಲಾನುಭವಿಗಳ ಸಂಖ್ಯೆ | NPHH ಪಡಿತರ ಫಲಾನುಭವಿಗಳ ಸಂಖ್ಯೆ | ಒಟ್ಟು ಪಡಿತರ ಫಲಾನುಭವಿಗಳ ಸಂಖ್ಯೆ |
|---|---|---|---|---|---|---|---|---|---|---|---|
| 1 | ಬಾಗಲಕೋಟೆ | 44,480 | 3,67,682 | **4,12,162** | 75,146 | **4,87,308** | 1,86,748 | 13,59,257 | **15,46,005** | 2,15,565 | **17,61,570** |
| 2 | ಬಳ್ಳಾರಿ | 24,726 | 2,73,456 | **2,98,182** | 56,918 | **3,55,100** | 98,196 | 10,35,487 | **11,33,683** | 2,02,829 | **13,36,512** |
| 3 | ಬೆಂಗಳೂರು ಪೂರ್ವ ವಲಯ | 2,108 | 73,114 | **75,222** | 95,367 | **1,70,589** | 8,792 | 2,56,123 | **2,64,915** | 3,41,708 | **6,06,623** |
| 4 | ಬೆಂಗಳೂರು ಉತ್ತರ ವಲಯ | 2,316 | 1,04,472 | **1,06,788** | 78,535 | **1,85,323** | 9,839 | 3,88,224 | **3,98,063** | 2,81,500 | **6,79,563** |
| 5 | ಬೆಂಗಳೂರು ದಕ್ಷಿಣ ವಲಯ | 4,762 | 97,555 | **1,02,317** | 91,477 | **1,93,794** | 18,765 | 3,39,655 | **3,58,420** | 3,30,356 | **6,88,776** |
| 6 | ಬೆಂಗಳೂರು ಪಶ್ಚಿಮ ವಲಯ | 3,899 | 1,64,870 | **1,68,769** | 1,32,053 | **3,00,822** | 15,285 | 5,64,149 | **5,79,434** | 4,76,312 | **10,55,746** |
| 7 | ಬೆಳಗಾವಿ | 66,444 | 10,68,907 | **11,35,351** | 3,53,933 | **14,89,284** | 2,62,029 | 37,08,589 | **39,70,618** | 11,85,001 | **51,55,619** |
| 8 | ಬೆಂಗಳೂರು ನಗರ | 11,139 | 4,46,928 | **4,58,067** | 1,54,796 | **6,12,863** | 47,788 | 14,73,188 | **15,20,976** | 5,34,473 | **20,55,449** |
| 9 | ಬೆಂಗಳೂರು ಗ್ರಾಮಾಂತರ | 13,670 | 2,11,848 | **2,25,518** | 31,316 | **2,56,834** | 59,314 | 7,30,606 | **7,89,920** | 1,13,861 | **9,03,781** |
| 10 | ಬೀದರ್ | 38,770 | 3,15,218 | **3,53,988** | 64,300 | **4,18,288** | 1,50,075 | 11,75,229 | **13,25,304** | 2,08,213 | **15,33,517** |
| 11 | ಚಾಮರಾಜನಗರ | 34,497 | 2,49,010 | **2,83,507** | 21,231 | **3,04,738** | 1,27,891 | 7,48,639 | **8,76,530** | 59,708 | **9,36,238** |
| 12 | ಚಿಕ್ಕಬಳ್ಳಾಪುರ | 26,662 | 2,70,690 | **2,97,352** | 35,252 | **3,32,604** | 1,10,873 | 8,98,249 | **10,09,122** | 1,12,984 | **11,22,106** |
| 13 | ಚಿಕ್ಕಮಗಳೂರು | 21,386 | 2,32,514 | **2,53,900** | 71,697 | **3,25,597** | 83,659 | 7,58,554 | **8,42,213** | 2,46,201 | **10,88,414** |
| 14 | ಚಿತ್ರದುರ್ಗ | 41,000 | 3,54,079 | **3,95,079** | 56,388 | **4,51,467** | 1,68,560 | 12,35,012 | **14,03,572** | 1,73,344 | **15,76,916** |
| 15 | ದಕ್ಷಿಣ ಕನ್ನಡ | 22,552 | 2,55,965 | **2,78,517** | 1,78,307 | **4,56,824** | 1,14,229 | 10,44,859 | **11,59,088** | 7,12,463 | **18,71,551** |
| 16 | ದಾವಣಗೆರೆ | 44,179 | 3,21,026 | **3,65,205** | 56,208 | **4,21,413** | 1,83,467 | 11,34,422 | **13,17,889** | 1,90,989 | **15,08,878** |
| 17 | ಧಾರವಾಡ | 29,001 | 3,61,373 | **3,90,374** | 1,07,639 | **4,98,013** | 1,14,876 | 12,86,536 | **14,01,412** | 3,64,798 | **17,66,210** |
| 18 | ಗದಗ | 27,407 | 2,30,309 | **2,57,716** | 45,694 | **3,03,410** | 1,05,629 | 7,68,369 | **8,73,998** | 1,53,641 | **10,27,639** |
| 19 | ಹಾಸನ | 22,549 | 4,16,669 | **4,39,218** | 57,914 | **4,97,132** | 92,325 | 13,72,267 | **14,64,592** | 1,80,773 | **16,45,365** |
| 20 | ಹಾವೇರಿ | 45,859 | 3,46,662 | **3,92,521** | 65,596 | **4,58,117** | 1,90,709 | 12,41,335 | **14,32,044** | 2,27,177 | **16,59,221** |
| 21 | ಕಲಬುರಗಿ | 60,529 | 5,18,475 | **5,79,004** | 1,29,698 | **7,08,702** | 2,33,963 | 18,87,870 | **21,21,833** | 4,46,442 | **25,68,275** |
| 22 | ಕೊಡಗು | 8,609 | 96,468 | **1,05,077** | 41,903 | **1,46,980** | 28,360 | 2,99,009 | **3,27,369** | 1,18,154 | **4,45,523** |
| 23 | ಕೋಲಾರ | 28,241 | 2,98,382 | **3,26,623** | 53,937 | **3,80,560** | 1,14,830 | 10,81,390 | **11,96,220** | 1,86,860 | **13,83,080** |
| 24 | ಕೊಪ್ಪಳ | 35,960 | 2,90,337 | **3,26,297** | 36,520 | **3,62,817** | 1,44,930 | 10,82,735 | **12,27,665** | 1,20,395 | **13,48,060** |
| 25 | ಮಂಡ್ಯ | 32,765 | 4,26,719 | **4,59,484** | 70,612 | **5,30,096** | 1,33,339 | 13,93,989 | **15,27,328** | 2,44,129 | **17,71,457** |
| 26 | ಮೈಸೂರು | 48,383 | 6,30,423 | **6,78,806** | 1,35,358 | **8,14,164** | 2,00,617 | 20,23,484 | **22,24,101** | 4,61,219 | **26,85,320** |
| 27 | ರಾಯಚೂರು | 50,010 | 4,06,650 | **4,56,660** | 56,780 | **5,13,440** | 1,88,185 | 14,68,962 | **16,57,147** | 1,81,847 | **18,38,994** |
| 28 | ಬೆಂಗಳೂರು ದಕ್ಷಿಣ | 17,745 | 2,63,077 | **2,80,822** | 31,103 | **3,11,925** | 71,716 | 8,55,821 | **9,27,537** | 97,503 | **10,25,040** |
| 29 | ಶಿವಮೊಗ್ಗ | 36,022 | 3,40,045 | **3,76,067** | 1,20,034 | **4,96,101** | 1,57,053 | 11,62,962 | **13,20,015** | 4,23,486 | **17,43,501** |
| 30 | ತುಮಕೂರು | 48,403 | 5,92,401 | **6,40,804** | 81,734 | **7,22,538** | 1,96,082 | 20,56,292 | **22,52,374** | 2,59,831 | **25,12,205** |
| 31 | ಉಡುಪಿ | 27,454 | 1,66,757 | **1,94,211** | 1,21,157 | **3,15,368** | 1,45,179 | 6,78,559 | **8,23,738** | 5,09,857 | **13,33,595** |
| 32 | ಉತ್ತರ ಕನ್ನಡ | 15,820 | 2,88,912 | **3,04,732** | 96,686 | **4,01,418** | 65,122 | 10,41,238 | **11,06,360** | 3,28,526 | **14,34,886** |
| 33 | ವಿಜಯನಗರ | 39,707 | 2,60,384 | **3,00,091** | 36,877 | **3,36,968** | 1,61,846 | 9,95,424 | **11,57,270** | 1,25,710 | **12,82,980** |
| 34 | ವಿಜಯಪುರ | 39,364 | 4,64,170 | **5,03,534** | 1,04,915 | **6,08,449** | 1,51,161 | 16,86,406 | **18,37,567** | 3,12,535 | **21,50,102** |
| 35 | ಯಾದಗಿರಿ | 28,162 | 2,42,162 | **2,70,324** | 24,856 | **2,95,180** | 1,11,127 | 9,46,653 | **10,57,780** | 84,675 | **11,42,455** |
| | **ಒಟ್ಟು** | **10,44,580** | **1,14,47,709** | **1,24,92,289** | **29,71,937** | **1,54,64,226** | **42,52,559** | **4,01,79,543** | **4,44,32,102** | **1,02,13,065** | **5,46,45,167** |

## ಅನುಬಂಧ-03

### ಶ್ರೀ ಶಶೀಲ್ ಜಿ ನಮೋಶಿ ( ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ಗುರತಿಲ್ಲದ ಪ್ರಶ್ನೆ ಸಂಖ್ಯೆ: 470

### District wise AAY & PHH Converted to NPHH details from 01.01.2024 to 31.07.2026

| Sl. | District | AAY RCs | PHH RCs | Total RCs |
|---|---|---|---|---|
| 1 | BAGALKOTE | 897 | 10364 | 11261 |
| 2 | BALLARI | 698 | 13926 | 14624 |
| 3 | BENGALURU EAST RANGE | 290 | 10233 | 10523 |
| 4 | BENGALURU NORTH RANGE | 253 | 13768 | 14021 |
| 5 | BENGALURU SOUTH RANGE | 674 | 17219 | 17893 |
| 6 | BENGALURU WEST RANGE | 442 | 25333 | 25775 |
| 7 | BELAGAVI | 1159 | 23670 | 24829 |
| 8 | BENGALURU | 1522 | 57174 | 58696 |
| 9 | BENGALURU RURAL | 671 | 9338 | 10009 |
| 10 | BIDAR | 885 | 9458 | 10343 |
| 11 | CHAMARAJANAGARA | 516 | 5780 | 6296 |
| 12 | CHIKKABALLAPURA | 1645 | 15338 | 16983 |
| 13 | CHIKKAMAGALURU | 548 | 6501 | 7049 |
| 14 | CHITRADURGA | 914 | 10931 | 11845 |
| 15 | DAKSHINA KANNADA | 297 | 4137 | 4434 |
| 16 | DAVANAGERE | 1148 | 11082 | 12230 |
| 17 | DHARWAR | 421 | 10457 | 10878 |
| 18 | GADAG | 794 | 5121 | 5915 |
| 19 | HASSAN | 673 | 14502 | 15175 |
| 20 | HAVERI | 679 | 8260 | 8939 |
| 21 | KALABURAGI | 1324 | 10929 | 12253 |
| 22 | KODAGU | 330 | 5674 | 6004 |
| 23 | KOLAR | 1329 | 15962 | 17291 |
| 24 | KOPPAL | 1069 | 9755 | 10824 |
| 25 | MANDYA | 1269 | 14283 | 15552 |
| 26 | MYSURU | 1589 | 26848 | 28437 |
| 27 | RAICHUR | 1991 | 12832 | 14823 |
| 28 | BENGALURU SOUTH | 1037 | 13370 | 14407 |
| 29 | SHIVAMOGGA | 1681 | 16474 | 18155 |
| 30 | TUMAKURU | 877 | 15367 | 16244 |
| 31 | UDUPI | 647 | 5365 | 6012 |
| 32 | UTTARA KANNADA | 212 | 5366 | 5578 |
| 33 | VIJAYANAGARA | 509 | 3151 | 3660 |
| 34 | VIJAYAPURA | 1350 | 15796 | 17146 |
| 35 | YADGIR | 869 | 5809 | 6678 |
| | **TOTAL** | **31209** | **459573** | **490782** |